Sri K. NAGAPPA ALVA.—The Central Pharmacy is just coming up Sir. It is true that just at present, we are not in a Position to supply according to the demand. We are making every arrangement to improve the condition.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಲ್ಲಿ ತೋರಿಸಿರತಕ್ಕ ಈ 55 ಲಕ್ಷ ರೂ.ಗಳಲ್ಲಿ ಜಿಲ್ಲಾಮಟ್ಟದಲ್ಲಿರುವ ಮತ್ತು ತಾಲ್ಲೂಕ್ ಮಟ್ಟಗಳಲ್ಲಿರುವ ಹಾಗೂ ಈ ಬೆಂಗಳೂರಿನಂಥ ದೊಡ್ಡದೊಡ್ಡ ನಗರಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಯಾವ ಆಧಾರದ ಮೇಲೆ ಔಷಧಿಗಳನ್ನು ಹಂಚಲಾಗುತ್ತಿದೆ.

ಶ್ರೀ ಕೆ. ನಾಗಪ್ಪ ಆಳ್ವ.—ಯಾವ್ಯಾವ ಆಸ್ಪತ್ರೆಗಳಿಗೆ ಯಾವಯಾವ ರೀತಿ ಔಷಧಿಗಳನ್ನೊದಗಿಸಬೇಕು ಎನ್ನತಕ್ಕ ಬಗ್ಗೆ ನಿರ್ದಿಷ್ಟ ಕ್ರಮಗಳಿವೆ. ಅದರ ಪ್ರಕಾರ ಈಗ ನಾವು ಹಂಚುತ್ತಿದ್ದೇವೆ.

---

## Sanctioning of the Rural Protected Water Supply Scheme to several Villages in Hiriyur Taluk

*Q.—573. Sri V. MASIYAPPA (Hiriyur).—

Will the Government be pleased to state :—

(*a*) whether representations were made by the Village Panchayats of Alur, Yelandur and Hamedal in Hiriyur Taluk for sanction of Rural protected water supply schemes to their village ;

(*b*) if so, whether any estimates were prepared for the same ;

(*c*) whether the Village Panchayats have resolved to give their quota of the estimated costs ;

(*d*) whether the estimates are sanctioned or not ;

(*e*) if not, why ?

*A.—Sri KONDAJJI BASAPPA (Deputy Minister for Co-operation) [on behalf of SRI RAMAKRISHNA HEGDE, Minister for Co-operation and Development].—

(*a*), (*b*) and (*c*) Yes.

(*d*) No.

(*e*) The resolutions passed by the three Panchayats are reported to have just been sent to the Executive Engineer, Chitradurga Division and are expected to be received by Government shortly. Further action will be taken when funds become available. In the meanwhile the funds available for the purpose have just been exhausted.

ಶ್ರೀ ವಿ. ಮಸಿಯಪ್ಪ.—ಈ ಪ್ರಶ್ನೋತ್ತರದಲ್ಲಿ ಒಂದು ಮುದ್ರಣ ದೋಷವಿದೆ. ಎಳನಡು ಗ್ರಾಮ ಎಂಬುದಕ್ಕೆ ಎಳಂದೂರು ಎಂತ ತಪ್ಪುಬಿದ್ದಿದೆ. ಈ ಎಸ್ಟಿಮೇಟುಗಳನ್ನು ಯಾವಾಗ ತಯಾರಿಸಲಾಯಿತು ?

†ಶ್ರೀ ಕೊಂಡಜ್ಜಿ ಬಸಪ್ಪ.—ಅವು ಈಗ ತಾನೆ ಸರ್ಕಾರಕ್ಕೆ ಬಂದಿವೆ. ಆದರೆ ಅವು ಯಾವಾಗ ತಯಾರಾದವು ಎನ್ನುವುದು ಈಗ ನನ್ನಲ್ಲಿಲ್ಲ.

ಶ್ರೀ ವಿ. ಮಸಿಯಪ್ಪ.—ಈ ಅಂದಾಜುಗಳು ಯಾವಾಗ ತಯಾರಾದವು ಎಂತ ಕೇಳಿದೆ ?

Sri KONDAJJI BASAPPA.—That information is not available with me.

ಶ್ರೀ. ವಿ. ಮಸಿಯಪ್ಪ.—ಈ ಎಸ್ಟಿಮೇಟುಗಳು 2ನೇ ಪಂಚವಾರ್ಷಿಕ ಯೋಜನೆಯಲ್ಲೇ ತಯಾರಾಗಿದ್ದರೂ ಅವು ಇದುವರೆಗೂ ಮಂಜೂರಾಗಿಲ್ಲವೆಂಬ ಅಂತ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—In fact when the estimates were sent to the Government they had not sent a copy of the resolution of the village panchayet aggreeing to meet their quota of contribution. So, the estimate could not be sanctioned till now.

ಶ್ರೀ ವಿ. ಮಸಿಯಪ್ಪ.—(ಸಿ) ಗೆ ಉತ್ತರವಾಗಿ ಈಗ ಹಣ ಮಂಗಿದು ಹೋಗಿದೆ ಎಂದು ತಿಳಿಸಲಾಗಿದೆ. ಇವುಗಳಿಗೆ 1963-64ನೇ ಸಾಲಿನಲ್ಲಾದರೂ ಹಣ ಒದಗಿಸತಕ್ಕ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಕಳೆದ ವರ್ಷ ಈ ಬಾಬಿಗೆ 50 ಲಕ್ಷ ರೂ.ಗಳನ್ನೊದಗಿಸಲಾಗಿತ್ತು. ಆಗಲೇ ಆದು ಸಾಲಲಿಲ್ಲ. ಈ ವರ್ಷದಲ್ಲಿ 8.97 ಲಕ್ಷ ರೂ. ಒದಗಿಸಿರುವಾಗ ಬಹಳ ಕಷ್ಟವಿದೆ. ಆದರೆ ನಾವೀಗ ಕೇಂದ್ರದವರಿಂದ ಹಣ ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಆ ಹಣ ಬಂದರೆ ಈ ಕಾರ್ಯವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ವಿ. ಮಸಿಯಪ್ಪ.—ಮಾನ್ಯ ಮಂತ್ರಿಗಳು ಈ ಗ್ರಾಮಗಳಲ್ಲಿ ಸಂಚರಣೆ ಮಾಡಿರುವುದರಿಂದ ಅವರಿಗೆ ಪೂರ್ಣ ಅನುಭವ ಇದೆ. ಈ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತತ್ವಾಪಿ ಎಳನಡು ಗ್ರಾಮಕ್ಕೆ ಪೂರಾ ತೊಂದರೆ ಇರುವುದು ತಮಗೆ ಗೊತ್ತಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಗೊತ್ತಿದೆ.

———

## Groups of Banjara Community in the State

*Q.—553. Sri M. N. KRISHNA SINGH (Jagalur).—

Will the Government be pleased to state :—

(*a*) The number of groups (tandas) of Banjara community in the State (Taluk-wise information may be given) ;

(*b*) the population of each group ;

(*c*) whether the educational facilities are provided in each group of this community in accordance with their population ?

*A.*—Sri K. PRABHAKAR (Deputy Minister for Social Welfare) [on behalf of SMT. YASHODHARA DASAPPA (Minister for Social Welfare)].—

(*a*), (*b*) and (*c*) *Vide* statement placed on the Table of the House. [Placed in the Mysore Legislature's Library *Vide* No. 15, 4th April 1963.]

ಶ್ರೀ ಎಂ. ಎಸ್. ಕೃಷ್ಣಸಿಂಗ್.—ರಾಜ್ಯದಲ್ಲಿ ತಂಡತಂಡವಾಗಿ ಅಲ್ಲಲ್ಲೇ ಇರತಕ್ಕ ಈ ಜನರ ಬಗ್ಗೆ ತಾಲ್ಲೂಕ್ ಲೆವಲ್‌ನಲ್ಲಿ ಯಾವ ಆಧಾರದ ಮೇಲೆ ಈ ಅಂಕಿಗಳನ್ನು ಶೇಖರಣೆ ಮಾಡಿದ್ದೀರಿ ?

ಶ್ರೀ ಕೆ. ಪ್ರಭಾಕರ್.—ಗ್ರಾಮಾಧಿಕಾರಿಗಳ ಹಾಗೂ ತಾಲ್ಲೂಕ್ ಮಟ್ಟದಲ್ಲಿ ಕಥೇರಿಗಳಲ್ಲರ ತಕ್ಕ ರಿಜಿಷ್ಟ್ರಿಗಳಲ್ಲಿರತಕ್ಕ ಅಂಕೀ ಆಧಾರದ ಮೇಲೆ ಇದನ್ನು ಒದಗಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಈ ಅಂಕಿ ಅಂಶಗಳು ಸರಿಯಲ್ಲ ಅಂದರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಎಲ್ಲವೂ ಹಾಗೆ ಆಗಿರುತ್ತೆಂದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಯಾವದಾದರೂ ಖಚಿತವಾಗಿ ತಿಳಿಸಿದರೆ ಪುನರ್ಪರಿಶೀಲನೆ ಮಾಡಬಹುದು.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಈ ರಿಜಿಷ್ಟ್ರಿಗಳನ್ನು ತಯಾರು ಮಾಡತಕ್ಕವರು ಯಾರು ?

ಶ್ರೀ ಕೆ. ಪ್ರಭಾಕರ್.—ತಾಲ್ಲೂಕು ಮಟ್ಟದಲ್ಲರತಕ್ಕ ರೆವಿನ್ಯೂ ಅಧಿಕಾರಿಗಳು ಈ ರೆಕ್ಕಪತ್ರಗಳನ್ನಿಡುವುದು ಮಾಮೂಲಾಗಿ ಬಂದಿದೆ.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ ಒಂದು ಲಂಬಾಣಿ ತಾಂಡಕ್ಕೆ ಮಾತ್ರ ವಿದ್ಯಾಸೌಕರ್ಯ ನೀಡಲಾಗಿದೆ ಎಂದು ಸರ್ಕಾರದವರ ಉತ್ತರದಲ್ಲಿ ತಿಳಿಸಿದೆ. ಆದರೆ ಈ ತಾಲ್ಲೂಕಿನಲ್ಲಿ ಚಿಕ್ಕತೊರೆಪಾಳ್ಯತಾಂಡ, ಸೋವಾನಗರತಾಂಡ್ಯ, ದೊಡ್ಡೇರಿ ತಾಂಡ್ಯ, ನಾಯ್ಕನಪಾಳ್ಯ,